‘ಎಷ್ಟಾಯ್ತು ಹೇಳಪ್ಪ’

‘ಏನೋ ಒಂದು ಕೊಟ್ಬಿಡಿ’

ಚಾಲಕನ ದೃಷ್ಟಿ ಮುಂದೆ ಓಡುತ್ತಿದ್ದ ಸುಮೋದ ಮೇಲೆಯೇ ಇತ್ತು. ನಿತ್ಯಾ ಮೀಟರ್ ನೋಡಿದಳು. 71 ರೂ. ತೋರಿಸುತ್ತಿತ್ತು. ನೂರು ರೂಪಾಯಿಯ ನೋಟನ್ನು ಚಾಲಕನಿಗಿತ್ತು ಆಟೋದಿಂದಿಳಿದರೆ, ಚಿಲ್ಲರೆ ಕೊಡುವ ಗೋಜಿಗೇ ಹೋಗದೆ ಅವನು ಗಾಡಿ ಓಡಿಸಿಯೇ ಬಿಟ್ಟ.

‘ಉಸ್ಸಪ್ಪಾ’ ನಿಟ್ಟುಸಿರು ಬಿಟ್ಟ ನಿತ್ಯಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದೊಳಗೆ ಅಡಿಯಿಟ್ಟಳು. ಗಾಳಿಗೆ ಹಾರಾಡಿ ಅಸ್ತವ್ಯಸ್ತವಾಗಿದ್ದ ಮುಂಗೂದಲನ್ನು ಸರಿಪಡಿಸಿಕೊಂಡಳು. ಗಂಟೆ ನಾಲ್ಕಾಗಿತ್ತು. ತನ್ನ ಪುಸ್ತಕಗಳನ್ನು ಕೊಡ ಬೇಕಾಗಿರುವುದು ಆ ಕಟ್ಟಡದ ಎರಡನೇ ಮಹಡಿಯಲ್ಲಿ. ಅವಳು ಇನ್ನೇನು ಮಹಡಿ ಏರಬೇಕು. ಅಷ್ಟರಲ್ಲಿ ಅವಳ ಎದೆ ಧಸಕ್ಕೆಂದಿತು! ಅವಳ ಕೈಯಲ್ಲಿ ಪುಸ್ತಕಗಳ ಚೀಲವೇ ಇರಲಿಲ್ಲ!. ಅದು ಆಟೋದಲ್ಲೇ ಉಳಿದು ಹೋಗಿತ್ತು! ಇಳಿಯುವ ಗಡಿಬಿಡಿಯಲ್ಲಿ ಅವಳದನ್ನು ಮರೆತೇ ಬಿಟ್ಟಿದ್ದಳು! ಚಾಲಕನ ಅವಸರವೇ ಎಲ್ಲದಕ್ಕೂ ಕಾರಣವಾಗಿತ್ತು.

ನಿತ್ಯಾಳಿಗೆ ಆಟೊ ಚಾಲಕನ ಮೇಲೆ ವಿಪರೀತ ಕೋಪ ಬಂತು. ಆದರೆ ಅವನನ್ನು ಇನ್ನೆಲ್ಲಿ ಹುಡುಕಲಿ? ಅವನಾಗಲೇ ಬಹಳ ದೂರ ಹೋಗಿರ ಬಹುದು. ಆಟೋದಲ್ಲಿ ‘ಚಾಲಕನ ಮಾಹಿತಿ’ ಎಂದು ಬರೆದು ಅಂಟಿಸಿದ್ದ ಚೀಟಿಯಿಂದ ಅವನ ಹೆಸರು ಆನಂದ ಎಂದು ನಿತ್ಯಾ ಗೊತ್ತು ಮಾಡಿ ಕೊಂಡಿದ್ದಳು. ಆದರೆ ಗಾಡಿಯ ನಂಬರಾಗಲೀ, ಚಾಲಕನ ಚರವಾಣಿ ಸಂಖ್ಯೆಯಾಗಲೀ ಅವಳ ಮನದಲ್ಲಿ ದಾಖಲಾಗಿರಲಿಲ್ಲ. ಈಗೇನು ಮಾಡಲಿ ಚಿಂತಿಸಿದಳು ನಿತ್ಯಾ. ಪುಸ್ತಕ ಸಲ್ಲಿಸಲು ಅಂದೇ ಕೊನೆಯ ಗಡುವಾಗಿತ್ತು. ಮನೆಗೆ ಹೋಗಿ ಪುಸ್ತಕದ ಬೇರೆ ಪ್ರತಿಗಳನ್ನು ತರೋಣವೆಂದರೆ, ಮನೆಯಲ್ಲಿ ಬೇರೆ ಪ್ರತಿಗಳೇ ಇರಲಿಲ್ಲ! ಪ್ರಕಾಶಕರಿಗೆ ಫೋನ್ ಮಾಡಿ ಪುಸ್ತಕದ ಪ್ರತಿಗಳನ್ನು ತರಿಸೋಣವೆಂದರೆ, ಅವರ ಫೋನ್ ಸಂಪರ್ಕ ಎಷ್ಟು ಪ್ರಯತ್ನಿಸಿದರೂ ಸಿಗದು. ಹತಾಶಳಾಗಿ ಮೆಟ್ಟಿಲ ಮೇಲೆ ಕುಸಿದು ಕುಳಿತಳು ನಿತ್ಯಾ. ಅವಳಿಗೆ ಅಳು ಒತ್ತರಿಸಿ ಬಂತು.

ಈ ಕಾದಂಬರಿ ಬರೆಯಲು ನಿತ್ಯಾ ತುಂಬಾ ಶ್ರಮಪಟ್ಟಿದ್ದಳು. ಅಸ್ಸಾಮಿನಲ್ಲಿ ಎರಡು ತಿಂಗಳು ವಾಸ್ತವ್ಯ ಹೂಡಿ, ಅಲ್ಲಿನ ಬುಡಕಟ್ಟು ಜನಾಂಗದ ಮಹಿಳೆಯರನ್ನು ಭೇಟಿ ಮಾಡಿ ವಿಷಯ ಸಂಗ್ರಹ ಮಾಡಿದ್ದಳು. ಅವಳ ಪತಿ ಆಕಾಶ ಬೆಂಗಳೂರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಶಾಖೆಯೊಂದರ ಮ್ಯಾನೇಜರ್. ಅವನ ಸ್ನೇಹಿತ ಶಶಿಧರ ಅಸ್ಸಾಮಿನ ಗುವಾಹಟಿಯಲ್ಲಿ ಕಾಲೇಜು ಉಪನ್ಯಾಸಕ. ಅವನ ಪತ್ನಿ ರೇಖಾ ನಿತ್ಯಾಳ ಸಹಪಾಠಿಯಾಗಿದ್ದವಳು. ಅವರ ಮನೆಯಲ್ಲಿ ನಿತ್ಯಾಳಿಗೆ ಎರಡು ತಿಂಗಳು ಉಳಿದುಕೊಳ್ಳುವ ವ್ಯವಸ್ಥೆ ಆಗಿತ್ತು. ಅಸ್ಸಾಮಿನ ನಿಸರ್ಗ ಸೌಂದರ್ಯ, ಪೂರ್ವಬೆಟ್ಟಗಳ ಮೇಲಿಂದ ವಿಜೃಂಭಿಸುವ ಸುಂದರ ಸೂರ್ಯೋದಯ, ಎಡೆಬಿಡದೆ ಮಳೆಸುರಿಯುವ ಗುಡ್ಡಗಾಡುಗಳ ವೈಭವ, ಹವಾಮಾನ ವೈಪರೀತ್ಯ, ಹಿಮಪಾತ, ಇಂಥ ಪರಿಸರದಲ್ಲಿ ವಾಸವಾಗಿರುವ ಮೂಲನಿವಾಸಿಗಳ ಜೀವನಕ್ರಮ, ಮಹಿಳೆಯರ ಸಮಸ್ಯೆಗಳು ಮುಂತಾದುವೆಲ್ಲ ಕಾದಂಬರಿಯ ಕಥಾ ಸಾಮ್ರಾಜ್ಯದೊಳಗೆ ಹಾಸು ಹೊಕ್ಕಾಗಿದ್ದವು. ಸ್ವತಃ ಭೇಟಿ ನೀಡಿ ಮಾಹಿತಿ ಸಂಗ್ರಹ ಮಾಡಿದ ಅನುಭವದಿಂದ ರಚಿಸಿದ ಕಾದಂಬರಿ ‘ಈಶಾನ್ಯ ಭಾರತಿ’ ತೃಪ್ತಿಕರವಾಗಿ ಮೂಡಿಬಂದಿತ್ತು.

ಈ ಕೃತಿ ಅವಳಿಗೆ ಸಂಪೂರ್ಣ ಸಾರ್ಥಕತೆಯನ್ನು ನೀಡಿತ್ತು. ಪ್ರಕಾಶಕರ ಕಲಾಕೌಶಲವೂ ಅದ್ಭುತವಾಗಿತ್ತು. ಆಕರ್ಷಕ ವಿನ್ಯಾಸದ ಸುಭದ್ರ ರಕ್ಷಾಕವಚ ಹಾಗೂ ಮನೋಹರವಾದ ಮುದ್ರಣದಿಂದ ಕೂಡಿದ ನಾಲ್ಕು ನೂರು ಪುಟಗಳ ಕಾದಂಬರಿ. ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಪ್ರಶಸ್ತಿಯ ಸ್ಪರ್ಧೆಗೆ ಇದನ್ನು ಸಲ್ಲಿಸಲೇ ಬೇಕೆಂದುಕೊಂಡಿದ್ದಳು. ಆದರೆ, ಅನಿರೀಕ್ಷಿತವಾಗಿ ಅತ್ತೆಯವರ ಅನಾರೋಗ್ಯದಿಂದಾಗಿ ಕೆಲವು ದಿವಸಗಳ ಮಟ್ಟಿಗೆ ನಿತ್ಯಾ ಊರಿಗೆ ಹೋಗ ಬೇಕಾಗಿತ್ತು. ಹಿಂದಿರುಗಿ ಬಂದಾಗ ಪ್ರಶಸ್ತಿಗೆ ಪುಸ್ತಕ ಸಲ್ಲಿಸುವ ಕೊನೆಯ ದಿನ ಬಂದಿತ್ತು. ಅವಸರದಿಂದ ತನ್ನೊಡನೆ ಉಳಿದಿರುವ ಮೂರೇ ಮೂರು ಪ್ರತಿಗಳನ್ನು ಹಿಡಿದುಕೊಂಡು ಹೊರಟವಳಿಗೆ ಆಟೋದಿಂದ ಇಳಿಯುವಾಗ ಇಂಥ ದುರ್ಘಟನೆ ಬಂದೊದಗಬೇಕೇ?

‘ಏನು ಮೇಡಂ, ಯಾಕೆ ಹೀಗೆ ಬೇಸರದಿಂದ ಕುಳಿತಿದ್ದೀರಿ ಮೆಟ್ಟಿಲ ಮೇಲೆ? ಏನಾಯ್ತು? ಏನಾಗಬೇಕಿತ್ತು?’ ಕಚೇರಿಯ ಸಿಬ್ಬಂದಿಯವನೊಬ್ಬ ವಿಚಾರಿಸಿದ.

‘ಪ್ರಶಸ್ತಿಗೆ ಪುಸ್ತಕ ಸಲ್ಲಿಸಲು ತಗೊಂಡು ಬಂದಿದ್ದೆ. ಪುಸ್ತಕ ಆಟೋದಲ್ಲೇ ಉಳಿದು ಹೋಯ್ತು. ಒಂದು ದಿನ ಹೆಚ್ಚು ಟೈಮ್ ಕೊಡೋಕ್ಕಾಗುತ್ತಾ?’

‘ಇಲ್ಲಾ ಮೇಡಂ. ಈಗಾಗಲೇ ಕೊನೆಯ ದಿನಾಂಕ ಒಮ್ಮೆ ವಿಸ್ತರಿಸಿ ಆಗಿದೆ. ಇನ್ನು ಸಾಧ್ಯ ಇಲ್ಲ. ನೋಡಿ, ಇನ್ನೂ ಒಂದು ಗಂಟೆ ಸಮಯ ಇದೆ. ಅಷ್ಟರೊಳಗೆ ಸಾಧ್ಯ ಆದರೆ ತಂದು ಕೊಡಿ. ಮತ್ತೆ ನಾಳೆ ಭಾನುವಾರ. ಸೋಮವಾರಾನೂ ರಜ ಇದೆ. ಮಂಗಳವಾರ ಬೆಳಗ್ಗೆ ಪುಸ್ತಕಗಳನ್ನೆಲ್ಲ ಆಯ್ಕೆ ಸಮಿತಿಗೆ ಕಳುಹಿಸಿಕೊಡಬೇಕು ಎಂದು ಆದೇಶವಿದೆ. ಇವತ್ತು ಕೊಡಲಿಕ್ಕೆ ಆಗದಿದ್ದರೆ ನಿಮಗೆ ಬರೋ ವರ್ಷನೇ ಅವಕಾಶ ಸಿಗೋದು’ ಅವನ ಉತ್ತರದಲ್ಲಿ ಅನುಕಂಪವಿತ್ತು.

ಎದ್ದು ಸೀರೆ ಕೊಡವಿಕೊಂಡು ಹೊರಟಳು ನಿತ್ಯಾ. ತನ್ನ ಪುಸ್ತಕ ಪ್ರಶಸ್ತಿಗೆ ಖಂಡಿತಾ ಅರ್ಹವಾದುದೇ. ಆದರೆ ಅದನ್ನು ಸಲ್ಲಿಸುವ ಯೋಗ್ಯತೆಯೂ ತನಗಿಲ್ಲವಾಯಿತಲ್ಲಾ! ಮತ್ತೆ ಆಟೊ ಹಿಡಿದು ಮನೆ ಸೇರುವಷ್ಟರಲ್ಲಿ ನಿತ್ಯಾ ಹೈರಾಣಾಗಿದ್ದಳು. ಹೊಟ್ಟೆ ಚುರುಗುಟ್ಟುತ್ತಿದ್ದರೂ, ಊಟದ ಸಿದ್ಧತೆ ಮಾಡುವ ಹುರುಪಿಲ್ಲ. ತನ್ನ ಕನಸಿನ ಕೂಸಾದ ಅತ್ಯಮೂಲ್ಯ ಕೃತಿಯೊಂದು, ತನ್ನದೇ ಅಚಾತುರ್ಯದಿಂದಾಗಿ ಮಾನ್ಯತೆಯ ಪ್ರಕ್ರಿಯೆಯಿಂದ ಹೊರಗುಳಿಯು ವಂತಾಯಿತಲ್ಲ ಎಂದು ಹಲುಬಿದಳು. ದಣಿದ ಜೀವ ಸೋಫಾದ ಮೇಲೊರಗಿದ ಸ್ವಲ್ಪ ಹೊತ್ತಿನಲ್ಲೇ ನಿದ್ದೆಗೆ ಜಾರಿತು.

* * *

ಅದೇ ದಿನ ನಿತ್ಯಾಳ ಪತಿ ಆಕಾಶ ಬ್ಯಾಂಕಿನ ಹವಾನಿಯಂತ್ರಿತ ಕೊಠಡಿಯಲ್ಲಿ ತಂಪಾಗಿರುವ ಬದಲು ಚಡಪಡಿಸುತ್ತಿದ್ದ. ಅವನು ತನ್ನ ಬ್ಯಾಂಕಿಗೆ ರೂಢಿಸಿ ಕೊಡಬೇಕಾಗಿದ್ದ ಇಪ್ಪತ್ತು ಕೋಟಿಗಳಷ್ಟು ನಿರಖು ಠೇವಣಿಯ ಗುರಿ ಮುಟ್ಟಬೇಕಾದ ದಿನ ಅದು. ಬ್ಯಾಂಕಿನ ಗ್ರಾಹಕರು ಮಾತ್ರವಲ್ಲ, ತನಗೆ ಪರಿಚಯವಿರುವ ಹಲವಾರು ಪ್ರತಿಷ್ಠಿತ ವ್ಯಕ್ತಿಗಳ ಮನವೊಲಿಸಿ ಠೇವಣಿ ಇಡಿಸುವಂತೆ ಪ್ರಯತ್ನ ಮಾಡಿ ಆಗಿತ್ತು. ಏನೇ ಮಾಡಿದರೂ ಗುರಿ ತಲುಪುವುದು ಸಾಧ್ಯವಾಗಿರಲಿಲ್ಲ. ಇನ್ನು ಐವತ್ತು ಲಕ್ಷ ಠೇವಣಿ ಸಿಕ್ಕಿದರೆ, ಅವನು ಈ ವರ್ಷದ ಗುರಿ ತಲುಪಿದ ಹಾಗೇ. ಆದರೆ, ಇಂದೇ ಯಾರು ಬಂದು ಅಷ್ಟು ಠೇವಣಿ ಇಡುವವರಿದ್ದಾರೆ? ಬಂಡವಾಳ ಹೂಡುವವರಿಗೆ ಈಗ ಎಷ್ಟೊಂದು ದಾರಿಗಳಿವೆ! ಭೂಮಿ, ಚಿನ್ನ, ಶೇರುಗಳು, ಬಾಂಡುಗಳು ಒಂದೇ ಎರಡೇ? ಅಲ್ಲದೆ ಬ್ಯಾಂಕಿನ ಬಡ್ಡಿ ದರವಂತೂ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ... ಯೋಚನೆಯಿಂದ ಆಕಾಶನಿಗೆ ತಲೆ ಧಿಂ ಎನ್ನುತ್ತಿತ್ತು.

ಕೊಠಡಿಯ ಬಾಗಿಲು ಬಡಿದ ಸದ್ದಾಯಿತು.

‘ಬನ್ನಿ ಒಳಗೆ’ ಆಹ್ವಾನಿಸಿದ ಆಕಾಶ.

ಒಳಗೆ ಬಂದವನು ಪರಿಚಿತ ವ್ಯಕ್ತಿಯೇ. ಸಾಧಾರಣ ಮೈಕಟ್ಟಿನ, ಗೋಧಿ ಮೈಬಣ್ಣದ ಅಬ್ಬಾಸ್. ತನ್ನ ಟ್ರೇಡ್ ಮಾರ್ಕ್ ಜೀನ್ಸ್ ಪ್ಯಾಂಟ್ ಬಿಳಿ ಜುಬ್ಬಾ ತೊಟ್ಟು, ಕೈಯಲ್ಲಿ ಮೊಬೈಲು ಹಿಡಿದು ನಿಂತಿದ್ದಾನೆ. ಅಬ್ಬಾಸನ ಜತೆಯೇ ಅವನು ಮೈಗೆ ಧಾರಾಳವಾಗಿ ಸಿಂಪಡಿಸಿಕೊಂಡಿದ್ದ ಪರಿಮಳ ದ್ರವ್ಯದ ಸುವಾಸನೆ ಕೋಣೆಯೆಲ್ಲಾ ಪಸರಿಸಿತು. ಬ್ಯಾಂಕಿನ ಈ ಶಾಖೆಯ ಕಾಯಂ ಗಿರಾಕಿಯಾದ ಅಬ್ಬಾಸ್ ಎಲ್ಲರಿಗೂ ಪರಿಚಿತನಾದ ಒಬ್ಬ ರಿಯಲ್ ಎಸ್ಟೇಟ್ ಏಜೆಂಟ್.

ಕಳೆಗುಂದಿದ ಮುಖದೊಂದಿಗೆ ಆಸೀನನಾಗಿದ್ದ ಮ್ಯಾನೇಜರನ್ನು ನೋಡಿ ಅಬ್ಬಾಸ್ ‘ಯಾಕೆ ಬಾಸ್, ಮೈಗೆ ಹುಷಾರಿಲ್ವಾ’ ಎಂದು ವಿಚಾರಿಸಿದ.

‘ಮೊದಲು ಕುಳಿತುಕೋ ಅಬ್ಬಾಸ್. ನನಗೇನಾಗಿಲ್ಲ. ನೀನು ಬಂದಿರೋ ವಿಚಾರ ಹೇಳು’ ಪ್ರಯತ್ನಪೂರ್ವಕ ನಗೆ ಬೀರಿದ ಆಕಾಶ.

‘ನನ್ನದೊಂದು ಚೆಕ್ಕು ಕಲೆಕ್ಷನಿಗೆ ಹಾಕೋದಿತ್ತು. ಅದರಲ್ಲಿ ಹೆಸರೇನೋ ಸ್ವಲ್ಪ ವ್ಯತ್ಯಾಸವಾಗಿದೆ ಅನ್ನೋ ಕಾರಣಕ್ಕೆ ಕೌಂಟರಿನಲ್ಲಿ ತಗೋತಾ ಇಲ್ಲ. ನೀವೇ ನೋಡಿ ಸಾರ್, ಏನಾಗಿದೆ ಅಂತ.’

ಅವನಿತ್ತ ಚೆಕ್ಕನ್ನು ಪರಿಶೀಲಿಸಿದ ಆಕಾಶನಿಗೆ ಅದರಲ್ಲಿ ಒಂದು ಕಡೆ ಸ್ಪೆಲ್ಲಿಂಗ್ ತಪ್ಪಾಗಿರುವುದು ಗೊತ್ತಾಯಿತು. ಹೆಸರಲ್ಲಿ ಒಂದು ‘ಬಿ’ ಬಿಟ್ಟು ಹೋಗಿತ್ತು. ಆದರೆ ಪರಿಚಯ ಇರುವ ವ್ಯಕ್ತಿಯಾದುದರಿಂದ, ಚೆಕ್ಕು ಕ್ಲಿಯರೆನ್ಸಿಗೆ ಕಳಿಸಿದರೆ ತಪ್ಪೇನಿಲ್ಲ. ಆಕಾಶ ಕರೆಗಂಟೆ ಅದುಮಿದ. ತಕ್ಷಣ ಪ್ರತ್ಯಕ್ಷನಾದ ಜವಾನನಿಗೆ ಹೇಳಿದ ‘ಈ ಚೆಕ್ಕು ಕಲೆಕ್ಷನಿಗೆ ಹಾಕಿ ರಸೀದಿ ಇಸ್ಕೊಂಡು ಬಾ’. ಅಬ್ಬಾಸನ ಸಮಸ್ಯೆ ಕ್ಷಣಮಾತ್ರದಲ್ಲಿ ಪರಿಹಾರವಾಯಿತು.

ನಿರಾಳತೆಯಿಂದ ಜುಬ್ಬದ ತೋಳುಗಳನ್ನು ಸರಿಪಡಿಸಿಕೊಳ್ಳುತ್ತಾ ಅಬ್ಬಾಸ್ ಆಕಾಶನನ್ನು ಪರೀಕ್ಷಕ ದೃಷ್ಟಿಯಿಂದ ನೋಡುತ್ತಾ ಕೇಳಿದ ‘ನೀವೇನೇ ಹೇಳಿ